(ಆ) ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2007

ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಜಗದೀಶ್ ಶೆಟ್ಟರ್** (ಕಂದಾಯ ಸಚಿವರು) :– ಮಾನ್ಯ ಅಧ್ಯಕ್ಷರೆ, 2007 ರ ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು.

**ಅಧ್ಯಕ್ಷರು** :– ಪ್ರಸ್ತಾವ ಏನೆಂದರೆ, "2007 ರ ಕರ್ನಾಟಕ ಸ್ಟ್ಯಾಂಪು(ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

**ಅಧ್ಯಕ್ಷರು** :– "ಖಂಡ 2 ರಿಂದ 8 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 8 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ :

**ಅಧ್ಯಕ್ಷರು** :– ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

**ಶ್ರೀ ಜಗದೀಶ್ ಶೆಟ್ಟರ್** (ಕಂದಾಯ ಸಚಿವರು) :– ಮಾನ್ಯ ಅಧ್ಯಕ್ಷರೆ, 2007 ರ ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು** :– ಪ್ರಸ್ತಾವನೆ ಏನೆಂದರೆ, "2007 ರ ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**(ಈ ಸಂದರ್ಭದಲ್ಲಿ ಬಾವಿಯಲ್ಲಿ ಧರಣಿ ನಿರತ ಕಾಂಗ್ರೆಸ್ ಸದಸ್ಯರು ಘೋಷಣೆ ಕೂಗುತ್ತಿದ್ದರು, ಮಾನ್ಯ ಸದಸ್ಯರಾದ, ಜೆ.ಸಿ. ಮಾಧುಸ್ವಾಮಿ, ವಾಟಾಳ್ ನಾಗರಾಜ್ ಮತ್ತು ಕೆ. ಜಯಪ್ರಕಾಶ್ ಹೆಗ್ಡೆಯವರು ಸದನದ ಬಾವಿಗೆ ಬಂದರು)**

**(ಗೊಂದಲ)**

**ಅಧ್ಯಕ್ಷರು** :– ನೀವು ವಿಧೇಯಕವನ್ನು ಪಾಸ್ ಮಾಡಿ ಕೊಡಿ ನಂತರ ಬರಗಾಲದ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡುತ್ತೇನೆಂದರೆ ಸಹಕರಿಸುವುದಿಲ್ಲ, ಯಾವುದೋ ತೆಗೆದುಕೊಳ್ಳಿ ಎನ್ನುತ್ತೀರಿ, ನಿಮಗೆ ಏನು ನೈತಿಕ ಹಕ್ಕಿದೆ? ನಿಮಗೆ ಮಧ್ಯಾಹ್ನ 2 ಗಂಟೆಗೆ ಸಮಯ ನಿಗದಿ ಮಾಡಿದ್ದೇನೆ, ಖಂಡಿತ ಅವಕಾಶ ಕೊಡುತ್ತೇನೆ, ತುರ್ತಾಗಿರುವ 2–3 ವಿಧೇಯಕಗಳನ್ನು ಪಾಸ್ ಮಾಡಿರೆಂದರೆ, ಸಿಟ್ಟು ಮಾಡಿಕೊಂಡು ಹೋಗುತ್ತೀರಿ, ನಿಮಗೆ ಏನು ನೈತಿಕ ಹಕ್ಕಿದೆ. ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆಂದು it is my commitment ನಾನು ಹೇಳಿದಂತೆ ನೀವು ಕೇಳುವುದಿಲ್ಲ, ಆದುದರಿಂದ ಏನು ಮಾಡುವುದಕ್ಕಾಗುತ್ತದೆ? ವಿಧೇಯಕಗಳು ಮೇಲ್ಮನೆಗೆ ಹೋಗಿ ಬರಬೇಕು. Your are not acting as responsible Opposition. At least two hours, I will fix up the time. ನೀವು ನನ್ನ ತಲೆಯ ಮೇಲೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಬರಗಾಲದ ಬಗ್ಗೆ ಚರ್ಚೆ ಮಾಡಲು ಮಧ್ಯಾಹ್ನ 2 ಗಂಟೆಗೆ ಅವಕಾಶ ಕೊಡುತ್ತೇನೆಂದು ಹೇಳಿದರೂ ನೀವು ಕೇಳುವುದಿಲ್ಲ, ನೀವು ಹೇಳಿದಂತೆ ನಾನು ಕೇಳುವುದಕ್ಕಾಗುವುದಿಲ್ಲ, ಚರ್ಚೆಗೆ ಅವಕಾಶ ಕೊಡುತ್ತೇನೆಂದು ನಾನು ಮಾತು ಕೊಟ್ಟಿದ್ದೇನೆ, ಮಧ್ಯಾಹ್ನ 2 ಗಂಟೆಗೆ ಕೊಡುತ್ತೇನೆ, ನೀವು ಹೇಳಿದಂತೆ ಕೊಡುವುದಕ್ಕಾಗುವುದಿಲ್ಲ, I will fix up the time. ಏನೆಂದರೆ, ಬೇಜವಾಬ್ದಾರಿಯಿಂದ ಮಾತನಾಡಿ, ಕೊನೆಗೆ ಎಲ್ಲಾ ಬೈಯ್ದುಕೊಂಡು ಹೋಗುವುದು. That is not correct. ಖರ್ಗೆಯವರೆ, ನೀವು ಹಿರಿಯ ಸದಸ್ಯರು, ನಿಮಗೆ ಗೌರವವನ್ನು ಕೊಡುತ್ತೇನೆ, ಮಧ್ಯಾಹ್ನ 2 ಗಂಟೆಗೆ ಅವಕಾಶ ಕೊಡುತ್ತೇನೆಂದರೂ You are not allowing. ನೀವು ಮಾತನಾಡಬಹುದಿತ್ತು, ನೋಡಿ ಒಂದು ಗಂಟೆಯಿಂದ ಚರ್ಚೆಯಾಯಿತು, ನಿಮ್ಮ ಇಷ್ಟದಂತೆ ಮಾಡುವುದಕ್ಕಾಗುವುದಿಲ್ಲ.